# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **371 (312)** |
| **ಸದಸ್ಯರ ಹೆಸರು** | **ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ವಿಷಯ** | **ಸರ್ಕಾರದ ವಿವಿಧ ಯೋಜನೆಗಳ ಕಾರ್ಯಗತ ವಿವರಗಳ ಬಗ್ಗೆ** |
| **ಉತ್ತರಿಸಬೇಕಾದ ದಿನಾಂಕ** | **14.09.2022** |
| **ಉತ್ತರಿಸುವ ಸಚಿವರು** | **ಕಂದಾಯ ಸಚಿವರು** |
| **ಪ್ರಶ್ನೆ** | **ಉತ್ತರ** |
| ಅ) ಕಳೆದ 5 ವರ್ಷಗಳಿಂದ ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ವಿಧವಾ ವೇತನ, ಅಂಗವಿಕಲರ ಪಿಂಚಣಿ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ವಿವಿಧ ಸರ್ಕಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; | ಕಳೆದ 5 ವರ್ಷಗಳಿಂದ ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ವಿಧವಾ ವೇತನ, ಅಂಗವಿಕಲರ ಪಿಂಚಣಿ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಸಂಬಂಧಿಸಿದಂತೆ ಒಟ್ಟು 315040 ಅರ್ಜಿಗಳು ಸ್ವೀಕೃತವಾಗಿರುತ್ತವೆ. |
| ಆ) ಸದರಿ ಅರ್ಜಿಗಳಲ್ಲಿ ಕಳೆದ 5 ವರ್ಷಗಳಿಂದ ಎಷ್ಟು ಅರ್ಜಿಗಳಿಗೆ ಮನ್ನಣೆಯನ್ನು ನೀಡಿ ಪಿಂಚಣಿಯನ್ನು ಮಂಜೂರು ಮಾಡಲಾಗಿದೆ; | ಕಳೆದ 5 ವರ್ಷಗಳಿಂದ ಸ್ವೀಕೃತವಾದ ಒಟ್ಟು ಅರ್ಜಿಗಳ ಪೈಕಿ 213090 ಅರ್ಹ ಪ್ರಕರಣಗಳಲ್ಲಿ ಅರ್ಜಿಗಳಿಗೆ ಮನ್ನಣೆಯನ್ನು ನೀಡಿ ಪಿಂಚಣಿ ಮಂಜೂರು ಮಾಡಲಾಗಿದೆ. |
| ಇ) ಬಾಕಿ ಉಳಿದಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸದಿರುವುದಕ್ಕೆ ಕಾರಣಗಳೇನು ಹಾಗೂ ಈ ಪಿಂಚಣಿಯನ್ನು ಯಾವಾಗ ಬಿಡುಗಡೆಗೊಳಿಸಲಾಗುತ್ತದೆ? | ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳನ್ನು 'ಸಕಾಲ' ಯೋಜನೆಯಡಿ ತರಲಾಗಿದ್ದು, ಅರ್ಜಿಗಳ ವಿಲೇವಾರಿಗೆ 45 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆ. ಬಾಕಿ ಉಳಿದಿರುವ ಒಟ್ಟು 6174 ಅರ್ಜಿಗಳು ಸಕಾಲ ಕಾಲಮಿತಿಯೊಳಗಿದ್ದು, ಭೌತಿಕ ಪರಿಶೀಲನೆ ನಂತರ ಅರ್ಹ ಪ್ರಕರಣಗಳಿಗೆ ಪಿಂಚಣಿ ಮಂಜೂರಾತಿ ನೀಡಲು ಕ್ರಮಕೈಗೊಳ್ಳಲಾಗುವುದು. |

**DSSP-LCQ- 24-2022**

(ಆರ್. ಅಶೋಕ)
ಕಂದಾಯ ಸಚಿವರು